**ದಿನಾಂಕಃ 10.06.2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು: ಶ್ರೀ ಕೆ ಆರ್ ಆರ್., 5 ರಿಂದ 7 ನೇ ಪ್ರತಿವಾದಿ ಪರ ವಕೀಲರಿಂದ**

**10.** ನಮ್ಮ ಒಟ್ಟು ಕುಟುಂಬಕ್ಕೆ ಒಂದು ಟ್ರಾಕ್ಟರ್ ಹಾಗೂ ಟ್ರಾಲಿ ಇರುತ್ತದೆ ಎಂದರೆ ಸರಿ. ಸದರಿ ಟ್ರಾಕ್ಟರ್ ಹಾಗೂ ಟ್ರಾಲಿಯ ನೊಂದಣಿ ಸಂಖ್ಯೆ ಕೆಎ-07-ಟಿ-2520 ಹಾಗೂ ಕೆಎ-07-ಟಿ-2521 ಎಂದರೆ ಸರಿ.

**11.** ನಮ್ಮ ಕುಟುಂಬಕ್ಕೆ ಹಸುಗಳು ಹಾಗೂ ಎತ್ತುಗಳು ಇವೆ ಎಂದರೆ ಸರಿಯಲ್ಲ. ನಮ್ಮ ಕುಟುಂಬಕ್ಕೆ ಹಸುಗಳು ಹಾಗೂ ಎತ್ತುಗಳು ಇದ್ದು ಅದನ್ನು 5 ನೇ ಪ್ರತಿವಾದಿ ಸಾಕುತ್ತಿದ್ದಾನೆ ಎಂದರೆ ಸರಿಯಲ್ಲ. ಅವುಗಳನ್ನು ಒಟ್ಟು ಕುಟುಂಬದ ಆದಾಯದಿಂದ ಖರೀದಿಸಲಾಗಿದೆ ಎಂದರೆ ಸರಿಯಲ್ಲ. ಈಗ ನನಗೆ ತೋರಿಸುತ್ತಿರುವ ಛಾಯಾಚಿತ್ರದಲ್ಲಿ ಕಾಣುತಿರುವ ಮನೆಯ 1 ಭಾಗದಲ್ಲಿ ವೆಂಕಟರವಣಪ್ಪ ಹಾಗೂ ಇನ್ನೊಂದು ಭಾಗದಲ್ಲಿ ನಾಗರಾಜಪ್ಪ ರವರು ವಾಸ ಇರುತ್ತಾರೆ ಎಂದರೆ ಸರಿಯಲ್ಲ. ಸರ್ವೇ ನಂ. 60 ರಲ್ಲಿ ತೆರೆದ ಬಾವಿ ಇರುತ್ತದೆ ಎಂದರೆ ಸರಿ. ಸದರಿ ಬಾವಿಗೆ ಪಂಪ್ ಸೆಟ್ ಇರುತ್ತದೆ ಎಂದರೆ ಸರಿ. ನನ್ನ ತಂದೆಯ ಸಮಾಧಿ ಇರುವ ಜಮೀನಿನಲ್ಲಿ ಹುಣಸೇ ಮರಗಳು ಇರುತ್ತವೆ ಎಂದರೆ ಸರಿಯಲ್ಲ.

**12.** ನನ್ನ ಹೆಸರಿನಲ್ಲಿ ಆಕ್ಟೀವ್ ಹೊಂಡಾ ಇರುತ್ತದೆ ಎಂದರೆ ಸರಿಯಲ್ಲ. ಸದರಿ ವಾಹನದ ನೊಂದಣಿ ಸಂಖ್ಯೆ ಕೆಎ-03-ಜೆಎ-7627 ಇರುತ್ತದೆ ಎಂದರೆ ಸರಿಯಲ್ಲ. ಸದರಿ ವಾಹನವನ್ನು ಒಟ್ಟು ಕುಟುಂಬದ ಆದಾಯದಿಂದ ಖರೀದಿಸಲಾಗಿದೆ ಎಂದರೆ ಸರಿಯಲ್ಲ. ನನ್ನ ತಂದೆಯ ಸಮಾಧಿ ಇರುವ ಜಮೀನಿನಲ್ಲಿ 4 ಬೊರ್ ವೆಲ್ ಗಳು ಇದ್ದು ಅವುಗಳಿಗೆ ವಿದ್ಯುತ್ ಸಂಪರ್ಕ ತೆಗೆದುಕೊಳ್ಳಲಾಗಿದೆ ಎಂದರೆ ಸರಿ. 4 ಬೊರ್ ವೆಲ್ ಗಳ ಪೈಕಿ 3 ಬೋರ್ ವೆಲ್ ಗಳು ಓಡುತ್ತಿದ್ದು, ಇನ್ನೊಂದು ನಿಂತು ಹೋಗಿರುತ್ತದೆ ಎಂದರೆ ಸರಿಯಲ್ಲ.

**13.** ಓಎಸ್ 69/2015 ರ ದಾವೆಯಲ್ಲಿ ನಾವು ರಾಜಿ ಮಾಡಿಕೊಂಡಿದ್ದು, "ಎ" ಷೆಡ್ಯೂಲ್ ಆಸ್ತಿಗಳು 8 ಜನರಾದ ನಮಗೆ ಬಂದಿದ್ದು, "ಬಿ" ಷೆಡ್ಯೂಲ್ ಆಸ್ತಿಯೂ ಸದಾಶಿವಪ್ಪ ರವರಿಗೆ ಹೋಗಿರುತ್ತವೆ ಎಂದರೆ ಸಾಕ್ಷಿಯೂ ರಾಜಿಯಾಗಿರುವುದು ನಿಜ ಆದರೆ ಅದು ಕ್ಯಾನ್ಸಲ್ ಆಗಿರುತ್ತದೆ ಎಂದು ನುಡಿಯುತ್ತಾರೆ. ಈ ಬಗ್ಗೆ ನಾನು ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ. "ಎ" ಷೆಡ್ಯೂಲ್ ಆಸ್ತಿಗಳಿಗೆ ಸಂಬಂದಿಸಿದಂತೆ ಈ ದಾವೆಯನ್ನು ದಾಖಲಿಸಿರುತ್ತೇನೆಂದರೆ ಸರಿ.

**14.** ನಮ್ಮ ಒಟ್ಟು ಕುಟುಂಬಕ್ಕೆ ಮುಳಬಾಗಿಲು ಪಟ್ಟಣದ ಸೋಮೇಶ್ವರ ಪಟ್ಟಣದಲ್ಲಿ 30 X 40 ಅಳತೆಯ ಸೈಟು ಇರುತ್ತದೆ ಎಂದರೆ ಸರಿಯಲ್ಲ. ಸದರಿ ಸೈಟನ್ನು ಒಟ್ಟು ಕುಟುಂಬದ ಆದಾಯದಿಂದ ಬಂದಂತಹ ಹಣದಲ್ಲಿ ನನ್ನ ಹೆಂಡತಿಯ ಹೆಸರಿನಲ್ಲಿ ಖರೀದಿಸಲಾಗಿದೆ ಎಂದರೆ ಸಾಕ್ಷಿಯೂ ಸೈಟು ಇರುವ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಮ್ಮ ಒಟ್ಟು ಕುಟುಂಬಕ್ಕೆ ಒಟ್ಟು 3 ಮನೆಗಳು ಇರುತ್ತವೆ ಎಂದರೆ ಸರಿ. ನಾನು ಈ ದಾವೆಯಲ್ಲಿ ಕೇವಲ 2 ಮನೆಗಳನ್ನು ಮಾತ್ರ ಸೇರಿಸಿರುತ್ತೇನೆಂದರೆ ಸಾಕ್ಷಿಯೂ ಮೊದಲು ಸುಮ್ಮನೆ ಇದ್ದು ಸ್ವಲ್ಪ ಸಮಯದ ನಂತರ ಅದರ ಸರ್ವೇ ನಂಬರ್ ಸಿಗಲಿಲ್ಲ ಆದ್ದರಿಂದ ಸೇರಿಸಿಲ್ಲ ಎಂದು ನುಡಿಯುತ್ತಾರೆ.

**15.** 1 ನೇ ದಾವಾ ಆಸ್ತಿಯಾದ ಸರ್ವೇ ನಂ. 64 ರ 10 ಎಕರೆ 11 ಗುಂಟೆ ಜಮೀನಿನಲ್ಲಿ ಪೂರ್ತಿ ಮಾವಿನ ತೋಪು ಇರುತ್ತದೆ ಎಂದರೆ ಸರಿ. ಸದರಿ ಆಸ್ತಿಯೂ ಎಲ್ಲರಾ ಹೆಸರಿನಲ್ಲಿ ಜಂಟಿ ನಮೂದು ಇರುತ್ತವೆ ಎಂದರೆ ಸರಿ. 2015 ರಿಂದ ನಾವೆಲ್ಲರೂ ಬೇರೆ ಬೇರೆ ವಾಸವಾಗಿರುತ್ತೇವೆ. ಈ ದಾವೆಯನ್ನು ದಾಖಲಿಸುವ ಪೂರ್ವದಲ್ಲಿ ನನಗೆ ನನ್ನ ಭಾಗ ಬೇಕೆಂದು ನನ್ನ ಅಣ್ಣಂದಿರ ಬಳಿ ಕೇಳಿರುತ್ತೇನೆ ಆದರೆ ಅವರು ಯಾರು ಮುಂದೆ ಬರಲಿಲ್ಲ.

**16.** ದಾವಾ "ಸಿ" ಷೆಡ್ಯೂಲ್ ನಲ್ಲಿ ಖಾಲಿ ನಿವೇಶನ ಇದ್ದು ಅದು ವೆಂಕಟರವಣಪ್ಪನ ಹೆಸರಿನಲ್ಲಿದ್ದು ಅದರಲ್ಲಿ ನಾನು ಶೆಡ್ ಹಾಕಿರುತ್ತೇನೆಂದರೆ ಸರಿಯಲ್ಲ. ಸದರಿ ಶೆಡ್ ನಲ್ಲಿ ನಾನು ಅನುಭವದಲ್ಲಿರುತ್ತೇನೆಂದರೆ ಸರಿಯಲ್ಲ. ಒಟ್ಟು ಕುಟುಂಬದ ಆಸ್ತಿಗಳಾದ ಹಸು, ಎತ್ತು, ಕಾರು, ದ್ವಿಚಕ್ರ ವಾಹನ, ಸೈಟು, ಮನೆ, ಹುಣಸೇ ಮರ ಹಾಗೂ ಬೋರ್ ವೆಲ್ ಗಳನ್ನು ಈ ದಾವೆಯಲ್ಲಿ ಸೇರಿಸದೇ ಈ ದಾವೆ ಊರ್ಜಿತವಾಗಿರುವುದಿಲ್ಲ ಎಂದೆ ಸರಿಯಲ್ಲ. 3 ಹುಣಸೇ ಮರಗಳ ಪೈಕಿ 1 ಹುಣಸೇ ಮರದ ಫಸಲನ್ನು ನಾನು ತೆಗೆದುಕೊಳ್ಳುತ್ತಿದ್ದೇನೆಂದರೆ ಸರಿಯಲ್ಲ.

**17.** ಓಎಸ್ 69/2015 ರ ದಾವೆಯಲ್ಲಿ ನಾವು ರಾಜಿ ಮಾಡಿಕೊಂಡಿರುವ ಡಿಕ್ರಿ ಈಗಲೂ ಚಾಲ್ತಿಯಲ್ಲಿದ್ದು, ನಾನು ಹೇಳುವಂತೆ ಅದು ಕ್ಯಾನ್ಸಲ್ ಆಗಿಲ್ಲ ಎಂದರೆ ಸರಿಯಲ್ಲ. ಓಎಸ್ 69/2015 ರ ಡಿಕ್ರಿಯಂತೆ ಖಾತೆ ಮಾಡಿಸಿಕೊಳ್ಳಲು ನನ್ನನ್ನು ಕರೆದಾಗ ನಾನು ಸಹಕರಿಸಿಲ್ಲ ಎಂದರೆ ಸರಿಯಲ್ಲ. ಈ ದಾವೆಯನ್ನು ನಾನು ಹಾಗೂ ನಾಗರಾಜು ಶಾಮೀಲಾಗಿ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇರುವುದಿಲ್ಲ.**
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇಳಿ ಕೇಳಿ ಸರಿ ಇದೆ.

(ಗೌಡ ಜಗದೀಶ ರುದ್ರೆ)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ ಮುಳಬಾಗಿಲು.